ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 3rd April 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Completion of the Machehalli Pickup Work in Maidala Village

68. SRI GANGABOVI (Gulur).—

Will the Minister of State for Minor Irrigation be pleased to state :—

(*a*) the reason for not completing the Machehalli pickup work of Maidala Village, Urdigere Hobli, Tumkur Taluk, so far even though the same was sanctioned 10 years back ;

(*b*) the reason for not furnishing any reply even though the Government was apprised of the same ;

(*c*) the action taken for the delay ;

(*d*) within what time the work would be completed ?

SMT. BASAVARAJESWARI (Deputy Minister for Social Welfare [On behalf of SRI A. J. DODDAMETI (Minister of State for Minor Irrigation)].—

(*a*) It was sanctioned in January 1963. The delay was due to Contractors and some technical matters.

(*b*) and (*c*) As the question was tabled newly the reply for the same has been furnished now.

(*d*) Will be completed as early as possible.

ಶ್ರೀ ಗಂಗಾಬೋವಿ.—ತುಮಕೂರು ತಾಲ್ಲೂಕು ಮೈದಾಳ ಗ್ರಾಮದ ಮಾಜೇಹಳ್ಳಿ ಪಿಕಪ್ ಈ1963ರಲ್ಲಿ ಮುಂಜೂರಾಯಿತು ಎಂದು ಹೇಳಿದ್ದಾರೆ. 6 ವರ್ಷದಿಂದ ಕೆಲಸವಾಗದೆ ನಿಧಾನವಾಗಿರುವುದಕ್ಕೆ ಕಾರಣವೇನು, ಸ್ವಾಮಿ ?

†ಶ್ರೀಮತಿ ಬಸವರಾಜೇಶ್ವರಿ.—ಅನೇಕ ಕಾರಣಗಳಿಂದ ವಿಳಂಬವಾಗಿದೆ. ಕಂಟ್ರಾಕ್ಟರಿಗೆ ಈ ಕೆಲಸವನ್ನು ಒಪ್ಪಿಸತಕ್ಕ ನಂದರ್ಭದಲ್ಲಿ ಪೀಸ್‌ಮೀಲ್ ಆಗಿ ಕೊಟ್ಟಿರುತ್ತಾರೆ. ಎರಡು ಮೂರು ಸಲ ನೋಟೀಸ್ ಕೊಟ್ಟಿದ್ದರೂ ಆತ ಕೆಲಸಮಾಡಿಲ್ಲ. ಸ್ವಲ್ಪಮಟ್ಟಿಗೆ ಪ್ರವಾಹ ಬಂದು ಕೊಚ್ಚಿ ಹೋಯಿತು. ಈ ಎಲ್ಲಾ ಕಾರಣಗಳಿಂದ ವಿಳಂಬವಾಗಿದೆ.

ಶ್ರೀ ಗಂಗಾಬೋವಿ.—ಕಂಟ್ರಾಕ್ಟರ ಜವಾಬ್ದಾರಿ ಎಂದು ಹೇಳುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಕೆಲವು ಅಧಿಕಾರಿಗಳಿಂದ ನಿಧಾನವಾಗಿದೆ. ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಬಸವರಾಜೇಶ್ವರಿ.—ನರ್ಕಾರದ ಗಮನಕ್ಕೆ ಬಂದಾಗ ಅಧಿಕಾರಿಗಳು ಯಾರು ಇದಕ್ಕೆ ಜವಾಬ್ದಾರರಿದ್ದಾರೆ ಎನ್ನುವ ವಿಚಾರದಲ್ಲಿ ಎನ್‌ಕ್ವೈರಿ ಮಾಡುತ್ತಿದ್ದೇವೆ.

ಶ್ರೀ ಗಂಗಾಬೋವಿ.—ಎಷ್ಟು ದಿವಸಗಳಲ್ಲಿ ನಂಬಂಧಪಟ್ಟವರಮೇಲೆ ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀಮತಿ ಬಸವರಾಜೇಶ್ವರಿ.—ಎನ್‌ಕ್ವೈರಿ ಮಾಡುತ್ತಿದ್ದೇವೆ, ವರದಿ ಬಂದಕೂಡಲೆ ಯಾರು ಜವಾಬ್ದಾರರೋ ಅವರಮೇಲೆ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಡ್ಯಾಮೇಜ್ ಆಗಲು ಜವಾಬ್ದಾರರು ಯಾರು ? ನಿಧಾನವಾದುದ್ದರಿಂದ ಫ್ಲಡ್ ಬಂದು ಡ್ಯಾಮೇಜ್ ಆಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಈಗಾಗಲೆ ಹೇಳಿದೆ, ರೋಕರ್ ಕಂಟ್ರಾಕ್ಟರಿಗೆ ಪೀಸ್‌ಮೀಲ್ ಆಗಿ ಕೆಲಸ ಕೊಡಲಾಗಿತ್ತು. ಸ್ವಲ್ಪ ಕೆಲಸವಾಗಿದೆ, ಫ್ಲಡ್ ಬಂದು ವಾಷ್‌ಔಟ್ ಆಗಿರುವುದಕ್ಕೆ ಜವಾಬ್ದಾರಿ ಸ್ವಲ್ಪಮಟ್ಟಿಗೆ ಅಧಿಕಾರಿಗಳಮೇಲೂ ಇದೆ.

ಶ್ರೀ ಎಂ. ನಾಗಪ್ಪ.—ಕಂಟ್ರಾಕ್ಟರಿಗೆ ಯಾವ ವರ್ಷ ಕೊಟ್ಟಿದೆ ? ತಾಂತ್ರಿಕ ತೊಂದರೆಯಿಂದ ಎಷ್ಟು ವರ್ಷ ಪೆಂಡಿಂಗ್ ಇತ್ತು ?

ಶ್ರೀಮತಿ ಬಸವರಾಜೇಶ್ವರಿ.—1963ರಲ್ಲಿ ನುಮಾರು 8 ನಾವಿರ ರೂಪಾಯಿಗೆ ಅಂದಾಜು ಮಾಡಿ ಕಂಟ್ರಾಕ್ಟರಿಗೆ ಕೊಡಲಾಗಿತ್ತು, ಇಲ್ಲಿಯವರೆಗೆ ಮಾಡಿಲ್ಲ, ಈಗ 8,220 ರೂಪಾಯಿ ಖರ್ಚಾಗಿದೆ, ಕಟ್ರಾಕ್ಟರು ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ. ಈಗ ರಿವೈಜ್ಡ್ ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ರಿವೈಜ್ಡ್ ಎಸ್ಟಿಮೇಟ್ ಮಾಡಲು ನಿಧಾನವಾಗಿರುವುದರಿಂದ ಕೆಲಸ ನಿಧಾನವಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಹಾಗಿಲ್ಲ. ವಾಷ್‌ಔಟ್ ಆಗಿರುವುದರಿಂದ ಸ್ವಲ್ಪ ಡೀಪ್ ಆಗಿ ಫೌಂಡೇಷನ್ ಹಾಕಿದರೆ ಉತ್ತಮ ಎಂದು ಎಂಜಿನಿಯರ್ ಅಭಿಪ್ರಾಯವಿರುವುದರಿಂದ ರಿವೈಜ್ಡ್ ಎಸ್ಟಿಮೇಟ್ ಮಾಡಿ ಕೆಲಸ ಮುಗಿನಬೇಕೆಂದು ತೀರ್ಮಾನವಾಗಿದೆ.

ಶ್ರೀ ಬಿ. ಪರಮೇಶ್ವರಪ್ಪ.—ಜವಾಬ್ದಾರಿಯನ್ನು ಕಂಟ್ರಾಕರ ಮೇಲೆ ಮತ್ತು ಅಧಿಕಾರಿಗಳ ಮೇಲೆ ಯಾವ ಪ್ರಮಾಣದಲ್ಲಿ ಹೇಗೆ ಹೊರಿಸಲಾಗುವುದು ?

ಶ್ರೀಮತಿ ಬಸವರಾಜೇಶ್ವರಿ.—ಈಗ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ, ಎನ್‌ಕ್ವೈರಿಯಾದ ಮೇಲೆ ನಿಗದಿ ಮಾಡಬೇಕು.

†indicates that the remarks or speeches have not been revised by the member concerned.